₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 23.06.2022 ಸಂಪುಟ: 7 ಸಂಚಿಕೆ: 179 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬುಡಕಟ್ಟು ಜನಾಂಗದ ಮಹಿಳೆ ಯೊಬ್ಬರನ್ನು ದೇಶದ ಉನ್ನತ ಸ್ಥಾನಕ್ಕೆ ಪರಿಗಣಿಸಿದ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ನಾಯಕರಿಗೆ ಕೃತಜ್ಞತೆಗಳು. ಅಭ್ಯರ್ಥಿ ಘೋಷಣೆಯ ಸುದ್ದಿ ತಿಳಿದ ಕೂಡಲೇ ನಂಬಲು ಸಾಧ್ಯವಾಗಿರಲಿಲ್ಲ. ಚುನಾವಣೆ ಮೂಲಕ ಉನ್ನತ ಹುದ್ದೆ ಅಲಂಕರಿಸಿದರೆ ಸಂವಿಧಾನದ ಆಶಯದಂತೆ ದೊರೆತ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಂಡು ದೇಶಕ್ಕಾಗಿ ಕೆಲಸ ನಿರ್ವಹಿಸುತ್ತೇನೆ.

-ದ್ರೌಪದಿ ಮುರ್ಮು
ರಾಷ್ಟ್ರಪತಿ ಅಭ್ಯರ್ಥಿ

15ನೇ ರಾಷ್ಟ್ರಪತಿ ಚುನಾವಣೆ

- ಭಾರತದ 15ನೇ ರಾಷ್ಟ್ರಪತಿ ಆಯ್ಕೆಗೆ ಚುನಾವಣೆ ಜುಲೈ 18ಕ್ಕೆ
- ಅಭ್ಯರ್ಥಿಗಳು ಪಡೆದ ಮತ ಎಣಿಕೆ ಜುಲೈ 21ಕ್ಕೆ
- ನಾಮಪತ್ರಗಳ ಪರಿಶೀಲನೆ: ಜೂನ್ 30ಕ್ಕೆ
- ಉಮೇದುವಾರಿಕೆ ಹಿಂಪಡೆಯಲು ಕೊನೆ ದಿನ: ಜುಲೈ 2
- ರಾಮನಾಥ್ ಕೋವಿಂದ್ ಅಧಿಕಾರ ಸ್ವೀಕರಿಸಿದ್ದು: ಜುಲೈ 25, 2017
- ಕೋವಿಂದ್ ಅಧಿಕಾರ ಅವಧಿ ಮುಕ್ತಾಯ: ಜುಲೈ 24, 2022
- ಅಭ್ಯರ್ಥಿಗಳು: ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು, ವಿಪಕ್ಷಗಳ ಅಭ್ಯರ್ಥಿ ಯಶವಂತ್ ಸಿನ್ಹಾ

ಪುಟ ತೆರೆದಂತೆ

ನಾಡುಕರುನಾಡು ಪುಟ 4, 5

- ಪಠ್ಯ ಪರಿಷ್ಕರಣೆ ವಿವಾದದ ಬಗ್ಗೆ ಸಿಎಂಗೆ ಮಾಹಿತಿ: ಸಚಿವ ನಾಗೇಶ್
- ಅಗ್ನಿಪಥ್ ಆರ್‌ಎಸ್‌ಎಸ್ ಚಿಂತನೆ ವಿಸ್ತರಿಸುವ ಯೋಜನೆ
- ರಾಜ್ಯದಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಳ
- ಲೋಕಸಭಾ ಚುನಾವಣೆ ಬಳಿಕ ಉ.ಕರ್ನಾಟಕ ಪ್ರತ್ಯೇಕ: ಕತ್ತಿ

ಸಂ.ಪುಟ 6

ದೊಡ್ಡವರ ಮಕ್ಕಳಾಗಿ ಹುಟ್ಟುವುದು ಬಹಳ ಕಷ್ಟ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್

ಸಂಗಮ 7

- ಅಗ್ನಿವೀರರಾಗಿ, ಅಗ್ನಿಕುಂಡಗಳಾಗ ಬೇಡಿ

ಪ್ರಕಾಶ್ ಶೇಷರಾಘವಾಚಾರ್

ಮೊದಲ ಬಾರಿಗೆ ಭಾರತದ ಪ್ರಥಮ ಪ್ರಜೆಯಾಗಲಿರುವ ಬುಡಕಟ್ಟು ಮಹಿಳೆ

ದ್ರೌಪದಿ ಮುರ್ಮು ಹಾದಿ

1997	ರಾಯ್ ರಂಗಪುರ್ ಜಿಲ್ಲೆ ಕೌನ್ಸಿಲರ್ ಆಗಿ ಆಯ್ಕೆ, ಅದೇ ವರ್ಷ ಉಪಾಧ್ಯಕ್ಷೆ.
2000	ಒಡಿಶಾ ವಿಧಾನಸಭೆ ಪ್ರವೇಶ ಸಾರಿಗೆ ಹಾಗೂ ವಾಣಿಜ್ಯ ಖಾತೆ ಸಚಿವೆ.
2004	ಒಡಿಶಾದ ಮೀನುಗಾರಿಕೆ ಸಚಿವೆಯಾಗಿ ಕಾರ್ಯ ನಿರ್ವಹಣೆ.
2004-2009	ರಾಯ್ ರಂಗಪುರ್ ಶಾಸಕಿಯಾಗಿ ಕಾರ್ಯ ನಿರ್ವಹಣೆ.
2002-2006	ಮಯೂರ್ ಭಂಜ್ ಜಿಲ್ಲಾ ಬಿಜೆಪಿ ಅಧ್ಯಕ್ಷೆಯಾಗಿ ನೇಮಕ.
2006-2009	ಬಿಜೆಪಿ ಎಸ್ಟಿ ಮೋರ್ಚಾ ರಾಜ್ಯ ಅಧ್ಯಕ್ಷೆಯಾಗಿ ಆಯ್ಕೆ.
2015	ಜಾರ್ಖಂಡ್ ಗೌರ್ನರ್ ಆಗಿ ನಿಯುಕ್ತಿ, ಕರೋನಾದಿಂದ 1 ವರ್ಷ ವಿಸ್ತರಣೆ
2017	ರಾಷ್ಟ್ರಪತಿ ಸ್ಥಾನಕ್ಕೆ ಹೆಸರು ಪರಿಗಣನೆ, ಕೊನೇ ಕ್ಷಣದಲ್ಲಿ ಕೋವಿಂದ್ ಆಯ್ಕೆ.
2022	ರಾಷ್ಟ್ರಪತಿ ಸ್ಥಾನಕ್ಕೆ ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕೃತ ಅಭ್ಯರ್ಥಿ.

ದ್ರೌಪತಿ ರಾಷ್ಟ್ರಪತಿ!?

ರಾಷ್ಟ್ರಪತಿ ಚುನಾವಣೆಯ ಅಂತಿಮ ಅಖಾಡ ಸಜ್ಜಾದಂತಾಗಿದೆ. ಎನ್‌ಡಿಎಯೇತರ ಪಕ್ಷಗಳು ಯಶವಂತ ಸಿನ್ಹಾ ಅವರನ್ನು ಆಯ್ಕೆ ಮಾಡಿ ಕೆಲವು ತಾಸುಗಳಲ್ಲೇ ಬಿಜೆಪಿ ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು ಮಂಗಳವಾರ ಘೋಷಿತರಾಗಿದ್ದಾರೆ.

ದ್ರೌಪದಿ ಮುರ್ಮು ಅವರನ್ನು ಬಿಜೆಡಿ ಮುಖ್ಯಸ್ಥ ಮತ್ತು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಬೆಂಬಲಿಸುವುದರೊಂದಿಗೆ, ಆಡಳಿತದ ವಿತರಣೆಯ ಮತ ಹಂಚಿಕೆಯು ಈಗ ಶೇ.50 ದಾಟಿದ್ದು ದೇಶಕ್ಕೆ ಮೊದಲ ಬುಡಕಟ್ಟು ಮಹಿಳಾ ರಾಷ್ಟ್ರಪತಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ. ಮುರ್ಮು ಉಮೇದುವಾರಿಕೆಯನ್ನು ಬಿಹಾರ ಸಿಎಂ, ಜೆಡಿಯು ನಾಯಕ ನಿತೀಶ್ ಕುಮಾರ್ ಹಾಗೂ ಮಾಜಿ ಪ್ರಧಾನಿ, ಜೆಡಿಎಸ್ ನಾಯಕ ಎಚ್.ಡಿ.ದೇವೇಗೌಡ ಅವರು ಸಹ ಸ್ವಾಗತಿಸಿದ್ದಾರೆ.

ಮುರ್ಮು ಹೆಸರನ್ನು ಪರಿಗಣಿಸಿದ್ದು ಇದೇ ಮೊದಲಲ್ಲ. 2017ರಲ್ಲೂ ರಾಷ್ಟ್ರಪತಿ ಹುದ್ದೆಯ ಸಂಭಾವ್ಯ ಹೆಸರುಗಳಲ್ಲಿ ದ್ರೌಪದಿ ಹೆಸರು ಮುಂಚೂಣಿಯಲ್ಲಿತ್ತು. ಆಗಲೂ ಪ್ರಧಾನಿ ಮೋದಿಯವರ ಈ ಕ್ರಮ ಸಾಕಷ್ಟು ಚರ್ಚೆಗೆ ಒಳಗಾಗಿತ್ತು.

ಅಷ್ಟಕ್ಕೂ ಯಾರು ಈ ದ್ರೌಪದಿ?: ಒಡಿಶಾ ಮೂಲದ ದ್ರೌಪದಿ ಮುರ್ಮು ಅವರ ತಂದೆ ಬಿರಂಚಿ ನಾರಾಯಣ್ ಟುಡು. ಎರಡು ದಶಕಗಳಿಂದ ರಾಜಕೀಯ ಕ್ಷೇತ್ರದಲ್ಲಿರುವ ದ್ರೌಪದಿ ಒಡಿಶಾದ ಮಾಜಿ ಸಚಿವೆ, ಜಾರ್ಖಂಡ್ ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದವರು. ಕೇಂದ್ರ ಸಚಿವೆಯೂ ಆಗಿದ್ದವರು. ಉತ್ತಮ ಶಾಸಕಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಒಂದೊಮ್ಮೆ ಇವರು ರಾಷ್ಟ್ರಪತಿಯಾದರೆ ಪ್ರತಿಭಾ ಪಾಟೀಲ್ ನಂತರ ಎರಡನೇ ಮಹಿಳಾ ರಾಷ್ಟ್ರಪತಿ ಎನಿಸಲಿದ್ದಾರೆ. ಒಡಿಶಾ/ಜಾರ್ಖಂಡ್ ಮೂಲದಿಂದ ಉನ್ನತ ಹುದ್ದೆಗೆ ಅಲಂಕರಿಸುವ ಮೊದಲ ಮಹಿಳೆ ಎನಿಸಿಕೊಳ್ಳಲಿದ್ದಾರೆ.

ಅತ್ಯುತ್ತಮ ಶಾಸಕಿ: ಮುರ್ಮು ತಮ್ಮ ಜನಸೇವೆಯಿಂದಾಗಿ ಉತ್ತಮ ಶಾಸಕಿ ಎಂಬ ಪ್ರಶಸ್ತಿಯನ್ನೂ ಪಡೆದಿದ್ದರು. 2007ರಲ್ಲಿ ನೀಲಕಂಠ ಎಂಬ ಪ್ರಶಸ್ತಿಯನ್ನೂ ಪಡೆದರು. 1997ರಲ್ಲಿ ಅವರು ಸ್ಥಳೀಯ ಕೌನ್ಸಿಲರ್ ಆಗಿ ಆಯ್ಕೆಯಾಗಿದ್ದರು. ನಂತರ ರಾಷ್ಟ್ರೀಯ ಸಲಹಾ ಸಮಿತಿ ಉಪಾಧ್ಯಕ್ಷರಾಗಿಯೂ ನೇಮಕಗೊಂಡರು. ಬಳಿಕ ಒಡಿಶಾದ ಶಾಸಕಿಯಾಗಿ ಆಯ್ಕೆಯಾಗಿದ್ದಲ್ಲದೆ, ಸಚಿವರಾಗಿಯೂ ಕರ್ತವ್ಯ ನಿಭಾಯಿಸಿದ್ದರು. 2002 ರಿಂದ 2009ರವರೆಗೆ ಬಿಜೆಪಿ ಪರಿಶಿಷ್ಟ ಪಂಗಡ ಮೋರ್ಚಾದ ರಾಷ್ಟ್ರೀಯ ಕಾರ್ಯನಿರ್ವಾಹಕ ಸದಸ್ಯರಾಗಿಯೂ ನೇಮಕಗೊಂಡರು.

ಬಿ.ಎ. ಪದವೀಧರೆ: ಬಿ.ಎ ಪದವೀಧರರಾದ ದ್ರೌಪದಿ, ರಾಯ್ ರಂಗಪುರದಲ್ಲಿರುವ ಶ್ರೀಅರಬಿಂದೋ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿದ್ದರು. ಒಡಿಶಾದ ನೀರಾವರಿ ಇಲಾಖೆಯಲ್ಲಿ ಜ್ಯೂನಿಯರ್ ಸಹಾಯಕ ಹುದ್ದೆಯಲ್ಲೂ ಕಾರ್ಯ ನಿರ್ವಹಿಸಿದರು. 1997ರಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಗೊಂಡರು. ಪತಿ ಶ್ಯಾಮ್ ಚರಣ ಮುರ್ಮು ದಿವಂಗತರಾಗಿದ್ದು, ಇಬ್ಬರು ಪುತ್ರರು ದ್ರೌಪದಿ ಅವರನ್ನು ಅಗಲಿದ್ದಾರೆ. ಪುತ್ರಿ ಇತಿಶ್ರೀ ಮುರ್ಮು ಮಾತ್ರ ಜತೆಗಿದ್ದಾರೆ.

25ಕ್ಕೆ ನಾಮಪತ್ರ ಸಲ್ಲಿಕೆ

ರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಆಯ್ಕೆಯಾದ ದ್ರೌಪದಿ ಮುರ್ಮು ಜೂನ್ 25ರಂದು ನಾಮಪತ್ರ ಸಲ್ಲಿಸಲಿದ್ದಾರೆ.

ಜಿಲ್ಲೆಗೆ 2ನೇ ಅತ್ಯುನ್ನತ ಹುದ್ದೆ

ಒಡಿಶಾ ರಾಜ್ಯದ ಮಯೂರ್ ಬಂಜ್ ಜಿಲ್ಲೆಯ ಗಿರೀಶ್ ಮುರ್ಮು ಅವರು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ (ಸಿಎಜಿ) ಆದ ನಂತರ ಮತ್ತದೇ ಜಿಲ್ಲೆಗೆ ದ್ರೌಪದಿ ಮುರ್ಮು ಮೂಲಕ ಎರಡನೇ ಬಾರಿ ದೇಶದ ಉನ್ನತ ಸ್ಥಾನ ಸಿಕ್ಕಲಿದೆ.

ದಾರಿದೀಪೋಕ್ತಿ

ನಾನು ನಿನಗಾಗಿ ಬಹಳ ಕಾಳಜಿವಹಿಸುತ್ತೇನೆ ಎಂದು ಯಾರಾದರೂ ಹೇಳಿದರೆ, ಅದನ್ನು ಕೇಳಬೇಕು, ನಂಬಬಾರದು. ಈ ವಿಷಯದಲ್ಲಿ ಕ್ರಿಯೆಯೊಂದೇ ಸತ್ಯ. ಹೇಳುವುದಕ್ಕಿಂತ, ಮಾಡುವುದು ಮುಖ್ಯ. ಮಾಡುವ ಮೊದಲು ಹೇಳಬಾರದು. ಮಾಡಿದ ನಂತರ ಹೇಳುವ ಅಗತ್ಯವಿಲ್ಲ.

ವಕ್ರತುಂಡೋಕ್ತಿ

ಹೆಂಗಸರು ಆಲೋಚನಾಪ್ರಿಯರು, ತಮ್ಮ ಉಗುರಿಗೆ ಯಾವ ಬಣ್ಣ ಹಾಕಿಕೊಳ್ಳಬೇಕು ಎಂದು ತಾಸುಗಟ್ಟಲೆ ಆಲೋಚಿಸುತ್ತಾರೆ.

ಇ.ಡಿ ವಿಚಾರಣೆ: ಕಾಲಾವಕಾಶ ಕೋರಿದ ಸೋನಿಯಾ

ದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗಲು ಮತ್ತಷ್ಟು ಕಾಲಾವಕಾಶ ನೀಡುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಜಾರಿ ನಿರ್ದೇಶನಾಲಯ(ಇ.ಡಿ.)ಕ್ಕೆ ಮನವಿ ಮಾಡಿದ್ದಾರೆ.

ಈ ಸಂಬಂಧ ಅಧಿಕಾರಿಗಳಿಗೆ ಪತ್ರ ಬರೆದಿರುವ ಸೋನಿಯಾ, ಕೋವಿಡ್ ಮತ್ತು ಶ್ವಾಸಕೋಶ ಸೋಂಕಿಗೆ ತುತ್ತಾಗಿರುವ ತಮಗೆ ಮನೆಯಲ್ಲೇ ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಪೂರ್ಣ ಗುಣಮುಖವಾಗುವವರೆಗೆ ವಿಚಾರಣೆಯನ್ನು ಮುಂದೂಡುವಂತೆ ಕೋರಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಟ್ವೀಟ್ ಮಾಡಿದ್ದಾರೆ.

ಅಫ್ಘಾನಿಸ್ತಾನ ಭೂಕಂಪಕ್ಕೆ ಸಾವಿರ ಮಂದಿ ಬಲಿ

ಕಾಬೂಲ್: ಪೂರ್ವ ಅಫ್ಘಾನಿಸ್ತಾನದಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ಪ್ರಬಲ ಭೂಕಂಪದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, ನೂರಾರು ಮಂದಿ ಗಾಯಗೊಂಡಿದ್ದಾರೆ. ಭೂಕಂಪನದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 6.0 ದಾಖಲಾಗಿದೆ. ಭೂಕಂಪನ ಸಂಭವಿಸಿರುವ ಪಕ್ತಿಕಾ ಪ್ರಾಂತ್ಯದಲ್ಲಿ ಬಹುತೇಕ ಮನೆಗಳು ನೆಲಸಮವಾಗಿವೆ. ಅನೇಕ ಜನರು ಅವಶೇಷಗಳಡಿ ಸಿಲುಕಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಪಾಕಿಸ್ತಾನ ಗಡಿಯ ಸಮೀಪವಿರುವ ಪಕ್ತಿಕಾ ಪ್ರಾಂತ್ಯದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತರನ್ನು ಹೆಲಿಕಾಪ್ಟರ್‌ಗಳ ಮೂಲಕ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತಿದೆ. ಆ ಭಾಗದ ನಾಲ್ಕು ಜಿಲ್ಲೆಗಳಲ್ಲಿ ತೀವ್ರ ಭೂಕಂಪನ ಸಂಭವಿಸಿರುವ ಬಗ್ಗೆ ತಾಲಿಬಾನ್ ಸರಕಾರದ ಉಪ ವಕ್ತಾರ ಬಿಲಾಲ್ ಕರಿಮಿ ಟ್ವೀಟ್ ಮಾಡಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮಹಾ ಸರ್ಕಾರಕ್ಕೆ ಏಕನಾಥ್ ಶಿಂಧೆ ಕಂಟಕ
ಸಿಎಂ ಉದ್ಧವ್ ಠಾಕ್ರೆಗೆ ಕೋವಿಡ್



ಫಲ ನೀಡದ ಶಿವಸೇನೆ ಸಂಧಾನ: ಸಿಎಂ ಹುದ್ದೆ ಬಿಡಲು ಸಿದ್ಧ ಎಂದ ಠಾಕ್ರೆ

40ಕ್ಕೇರಿದ ಬಂಡಾಯಗಾರರ ಬಲ, ಸೂರತ್‌ನಿಂದ ಗುವಾಹಟಿಗೆ ಶಿಫ್ಟ್

ಶಿಂಧೆ ಕಿಲಾಡಿ, ಅಡಿ ಮೇಲಾದ ಆಘಾಡಿ

ಮತಗಳ ಲೆಕ್ಕಾಚಾರ

ಮಹಾರಾಷ್ಟ್ರದ ವಿಧಾನಸಭೆ ಒಟ್ಟು ಸ್ಥಾನ	288
ಒಬ್ಬ ಶಾಸಕರು ವಿಧಿವಶ ಹಿನ್ನೆಲೆ ಉಳಿದ ಬಲ	287
ಬಹುಮತಕ್ಕೆ ಕನಿಷ್ಠ ಸ್ಥಾನ	144
ಬಿಜೆಪಿಗೆ ಈಗಿರುವ ಶಾಸಕ ಬಲ	106
ಬಹುಮತಕ್ಕೆ ಬಿಜೆಪಿಗೆ ಕೊರತೆ ಇರುವ ಶಾಸಕರು	37
ಏಕನಾಥ್ ಶಿಂಧೆ ಬೆಂಬಲಿತ ಶಾಸಕರು	33
ಶಿಂಧೆ ಜತೆಗೆ ಇರುವ ಪಕ್ಷೇತರ ಶಾಸಕರು	07

ಮುಂಬೈ: ಮಹಾರಾಷ್ಟ್ರದಲ್ಲಿ ಮಹಾ ವಿಕಾಸ ಆಘಾಡಿ ಸರ್ಕಾರದ ವಿರುದ್ಧ ಸಿಡಿದೆದ್ದ ಸಚಿವ ಏಕನಾಥ್ ಶಿಂಧೆ ಪರವಾಗಿ ಶಿವಸೇನೆಯ 33 ಶಾಸಕರು ಸೇರಿ 7 ಪಕ್ಷೇತರ ಶಾಸಕರು ಬೆಂಬಲ ವ್ಯಕ್ತಪಡಿಸಿದ್ದಾರೆ. ಇದರೊಂದಿಗೆ ವಿಧಾನಸಭೆ ಅಧಿವೇಶನದಲ್ಲಿ ವಿಶ್ವಾಸ ಮತ ಯಾಚನೆ ನಡೆಸುವಂತೆ ರಾಜ್ಯಪಾಲ ಭಗತ್‌ಸಿಂಗ್ ಕೊಶ್ಯಾರಿಗೆ ಬಂಡಾಯ ಶಾಸಕರು ಬರೆಯುವ ಸಿದ್ಧತೆಯಲ್ಲಿದ್ದಾರೆ.

ಏತನ್ಮಧ್ಯೆ, ಮೊದಲ ಬಾರಿಗೆ ಫೇಸ್ ಬುಕ್ ಲೈವ್‌ನಲ್ಲಿ ಮಾತನಾಡಿದ ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ, ತಾವು ರಾಜೀನಾಮೆ ನೀಡಲು ಸಿದ್ಧ ಎಂದು ಹೇಳಿದ್ದಾರೆ. 'ಮುಖ್ಯಮಂತ್ರಿ ಸ್ಥಾನದ ಮೇಲೆ ಯಾವುದೇ ಆಸೆ ಇಲ್ಲ ಮತ್ತು ನಮ್ಮ ಪಕ್ಷ ಶಿವಸೇನೆಯು ಹಿಂದುತ್ವವನ್ನು ಎಂದಿಗೂ ಬಿಟ್ಟು ಕೊಡುವುದಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಮಹಾ ವಿಕಾಸ ಆಘಾಡಿ ಬಲ ಎಷ್ಟು?

ಶಿವಸೇನೆ ಶಾಸಕರು	55
ಎನ್‌ಸಿಪಿ ಸಂಖ್ಯೆ	53
ಕಾಂಗ್ರೆಸ್ ಬಲಟ	44
ಬಿವಿಎ ಶಾಸಕರು	03

'ಮುಖ್ಯಮಂತ್ರಿ ಮತ್ತು ಶಿವಸೇನೆ ಅಧ್ಯಕ್ಷ ಸ್ಥಾನವನ್ನು ನಿಭಾಯಿಸಲು ನಾನು ಅಸಮರ್ಥನೆಂದು ನನ್ನ ಮುಂದೆ ಬಂದು ಒಬ್ಬ ಶಾಸಕ ಹೇಳಿದರೂ ನಾನು ತಕ್ಷಣ ರಾಜೀ ನಾಮೆ ನೀಡುತ್ತೇನೆ. ನಾನು ನನ್ನ ರಾಜೀನಾಮೆ ಪತ್ರ ಸಿದ್ಧಪಡಿಸಿದ್ದೇನೆ ಮತ್ತು ನೀವೇ ಅದನ್ನು ರಾಜ ಭವನಕ್ಕೆ ಕೊಂಡೊಯ್ಯಿರಿ' ಎಂದು ಠಾಕ್ರೆ ಹೇಳಿದ್ದಾರೆ.

ಹುದ್ದೆ ತೊರೆಯುವ ಠಾಕ್ರೆ ಹೇಳಿಕೆ ಬೆನ್ನಲ್ಲೇ ಎನ್‌ಸಿಪಿ ಮುಖ್ಯಸ್ಥ ಶರದ್‌ಪವಾರ್ ಅವರು ಮುಖ್ಯಮಂತ್ರಿಯನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಚರ್ಚಿಸಿದ್ದಾರೆ.

ಬಿಕ್ಕಟ್ಟು ಮುಂದುವರಿದಿರುವಂತೆಯೇ ಇತ್ತ ಸಿಎಂ ಉದ್ಧವ್ ಠಾಕ್ರೆ, ಮುಂಬೈನ ತಮ್ಮ ಅಧಿಕೃತ ನಿವಾಸ 'ವರ್ಷಾ'ತೊರೆದು ಸ್ವಂತ 'ಮಾತೋಶ್ರೀ' ನಿವಾಸಕ್ಕೆ ಕುಟುಂಬ ಸಮೇತ ಮರಳಿದ್ದಾರೆ.

ಈ ಕುರಿತು ಸಂಜಯ್ ರಾವತ್ ಸ್ಪಷ್ಟನೆ ನೀಡಿದ್ದು, ಉದ್ಧವ್ ಠಾಕ್ರೆ ಅವರು ಅಧಿಕೃತ ನಿವಾಸವನ್ನು ತೊರೆದಿದ್ದಾರೆಯೇ ಹೊರತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡಿಲ್ಲ. ಮುಖ್ಯಮಂತ್ರಿಯಾಗಿ ಠಾಕ್ರೆ, ಮುಂದುವರಿಯಲಿದ್ದಾರೆ ಎಂದು ಹೇಳಿದರು.

ಇದರ ನಡುವೆಯೇ 33 ಶಿವಸೇನೆ ಶಾಸಕರು ಬಂಡಾಯಗಾರ ಏಕನಾಥ್ ಶಿಂಧೆ ಅವರನ್ನು ತಮ್ಮ ನಾಯಕ ನನ್ನಾಗಿ ಬೆಂಬಲಿಸಿ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ.

ಶಿವಸೇನೆ ಪಕ್ಷದ ಮುಖ್ಯ ಸಚೇತಕ ಸುನೀಲ್ ಪ್ರಭು ಅವರು ಕರೆದಿರುವ ಸಭೆ ಕಾನೂನು ಬಾಹಿರ ಎಂದು ಬಂಡಾಯ ಶಾಸಕರು ಪ್ರತಿಪಾದಿಸಿದ್ದಾರೆ. ಬಂಡಾಯ ಗುಂಪಿನಿಂದ ಭರತ್ ಗೊಗಾವ್ಲೆ ಅವರನ್ನು ಮುಖ್ಯ ಸಚೇತಕರನ್ನಾಗಿ ನೇಮಿಸಲಾಗಿದೆ ಮತ್ತು ಅವರು ಇನ್ನೂ ಶಿವಸೇನೆಯೊಂದಿಗೆ ಇದ್ದಾರೆ ಎಂದು ಪತ್ರದಲ್ಲಿ ಪ್ರತಿಪಾದಿಸಲಾಗಿದೆ.

→ 4

ಮಹಾ ರಾಜಕೀಯ ಬೆಳವಣಿಗೆಗಳು

- ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಜತೆಗಿನ ದೂರವಾಣಿ ಸಂಭಾಷಣೆ ಬಳಿಕ ಶಿಂಧೆ, ಬೆಂಬಲಿತ ಶಾಸಕರು ಗುವಾಹಟಿಗೆ ಶಿಫ್ಟ್.
- ಶಿಂಧೆ ಬೇಡಿಕೆ ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಲಾಗುತ್ತಿದ್ದು, ಶೀಘ್ರವೇ ಎಲ್ಲರೂ ತಮ್ಮನ್ನು ಕೂಡಿಕೊಳ್ಳುತ್ತಾರೆ ಎಂದ ಠಾಕ್ರೆ.
- ಬಿಜೆಪಿ ಜತೆ ಸೇರಿ ಸರಕಾರ ಮುನ್ನಡೆಸಲು ಸಿಎಂಗೆ ಮಾತುಕತೆ ವೇಳೆ ಏಕನಾಥ್ ಶಿಂಧೆ ಷರತ್ತು.
- ಹಳೆಯ ಅನುಭವದ ಹಿನ್ನಲೆಯಲ್ಲಿ ಬಿಜೆಪಿ ಮೈತ್ರಿ ಔಚಿತ್ಯವನ್ನು ಪ್ರಶ್ನಿಸಿದ ಉದ್ಧವ್ ಠಾಕ್ರೆ
- ಶಿಂಧೆ, ಬೆಂಬಲಿತ ಶಾಸಕರನ್ನು ತಾನು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಿ ಇರಿಸಿದ ಬಿಜೆಪಿ.
- ಏಕನಾಥ್ ಶಿಂಧೆ ಅವರೊಂದಿಗೆ ಸರಕಾರ ರಚಿಸಲು ಪಕ್ಷವು ಮುಕ್ತ ಎಂದ ಮಹಾರಾಷ್ಟ್ರದ ಬಿಜೆಪಿ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್.
- ಶಿವಸೇನೆಯಲ್ಲಿನ ಬಿಕ್ಕಟ್ಟು ಅವರ ಆಂತರಿಕ ವಿಷಯ ಎಂದ ಅಘಾಡಿ ಭಾಗವಾಗಿರುವ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್
- ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅನ್ನು ಭೇಟಿ ಮಾಡಿದ ಮಹಾ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್.

ವಾಪಸ್ ಮರಳಿದ ಇಬ್ಬರು!

ಮಹಾರಾಷ್ಟ್ರದ ರಾಜಕೀಯ ಬಿರುಗಾಳಿಯ ಮಧ್ಯೆ ಮತ್ತೊಂದು ಟ್ವಿಸ್ಟ್ ಪಡೆದುಕೊಂಡಿದ್ದು, ಶಿವಸೇನೆಯ ಬಂಡಾಯ ನಾಯಕ ಏಕನಾಥ್ ಶಿಂಧೆ ಅವರನ್ನು ಸೇರಿಕೊಂಡಿದ್ದಾರೆ ಎಂದು ಈ ಹಿಂದೆ ಊಹಿಸಲಾಗಿದ್ದ ಶಿವಸೇನೆಯ ಇಬ್ಬರು ಶಾಸಕರಾದ ನಿತಿನ್ ದೇಶಮುಖ್ ಮತ್ತು ಕೈಲಾಶ್ ಪಾಟೀಲ್ ಅವರು ಮುಖ್ಯಮಂತ್ರಿ ಉದ್ಧವ್ ಠಾಕ್ರೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ತಮ್ಮನ್ನು ಅಪಹರಿಸಲಾಗಿತ್ತು. ಗುಜರಾತ್‌ನ ಸೂರತ್‌ಗೆ ಕರೆದೊಯ್ಯಲಾಗಿತ್ತು, ಅಲ್ಲಿಂದ ತಪ್ಪಿಸಿಕೊಂಡು ಲಾರಿ ಹತ್ತಿಕೊಂಡು ಬಂದಿದ್ದೇವೆ ಎಂದಿದ್ದಾರೆ.

ಉದ್ಧವ್ ಠಾಕ್ರೆ

ಏಕನಾಥ್ ಶಿಂಧೆ

ದೆಹಲಿಗೆ ಇಂದು ಬೊಮ್ಮಾಯಿ

ರಾಜಕೀಯ ವಿಶೇಷವೇನೂ ಇಲ್ಲ!

ಬೆಂಗಳೂರು: ವರಿಷ್ಠರ ಬುಲಾವ್ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ದೆಹಲಿಗೆ ತೆರಳುತ್ತಿದ್ದು, ಕುತೂಹಲ ಮೂಡಿಸಿದೆ.

ಮೂಲಗಳ ಪ್ರಕಾರ, ಸಿಎಂ ದೆಹಲಿ ಭೇಟಿಯ ಹಿಂದೆ ಯಾವುದೇ ರಾಜಕೀಯ ಕಾರಣ ಇಲ್ಲ ಎನ್ನಲಾಗಿದ್ದು. ಜೂ. 25ರಂದು ನಾಮಪತ್ರ ಸಲ್ಲಿಸಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ನಾಮಪತ್ರಕ್ಕೆ ಸೂಚಕರಾಗಿ ಸಹಿ ಹಾಕಲು ತೆರಳುತ್ತಿದ್ದಾರೆ. ಅದಕ್ಕಾಗಿ ಬಿಜೆಪಿ ಅಧಿಕಾರದಲ್ಲಿರುವ ಎಲ್ಲ ರಾಜ್ಯಗಳ ಸಿಎಂಗಳನ್ನೂ ವರಿಷ್ಠರು ದೆಹಲಿಗೆ ಆಹ್ವಾನಿಸಿದ್ದಾರೆ ಎನ್ನಲಾಗಿದೆ.

ಮುಖ್ಯಮಂತ್ರಿಗಳ ಅಧಿಕೃತ ಪ್ರವಾಸ ಪಟ್ಟಿಯ ಪ್ರಕಾರ, ಗುರುವಾರ ಮಧ್ಯಾಹ್ನ 1.20ಕ್ಕೆ ಅವರು ಬೆಂಗಳೂರಿನಿಂದ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ದೆಹಲಿಯ ಕರ್ನಾಟಕ ಭವನದಲ್ಲಿ ಅವರು ತಂಗಲಿದ್ದು, ಶುಕ್ರವಾರ ಮಧ್ಯಾಹ್ನ 1.30ಕ್ಕೆ ಅವರು ದೆಹಲಿಯಿಂದ ಬೆಂಗಳೂರಿಗೆ ವಾಪಸ್ ಹೊರಡಲಿದ್ದಾರೆ. ಇದರ ಮಧ್ಯೆ ಗುರುವಾರ ಸಂಜೆ ಮತ್ತು ಶುಕ್ರವಾರ ಬೆಳಗ್ಗೆ ಕೇಂದ್ರದ ಹಲವು ಸಚಿವರನ್ನು ಅವರು ಭೇಟಿ ಮಾಡುವ ಕಾರ್ಯಕ್ರಮವಿದೆ ಎಂದು ಮೂಲಗಳು ಹೇಳಿವೆ.

ಏನೂ ಆಗಲ್ಲ: ಸದ್ಯ ರಾಷ್ಟ್ರಪತಿ ಚುನಾವಣೆ ನಡೆಯುತ್ತಿರುವುದರಿಂದ ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಕುರಿತಂತೆ ಯಾವುದೇ ಚರ್ಚೆ ನಡೆಯುವ ಸಾಧ್ಯತೆ ಇಲ್ಲ. ಜತೆಗೆ ಮಹಾರಾಷ್ಟ್ರದಲ್ಲೂ ರಾಜಕೀಯ ಬೆಳವಣಿಗೆಗಳಾಗುತ್ತಿರುವ ಹಿನ್ನಲೆಯಲ್ಲಿ ವರಿಷ್ಠರು ಕರ್ನಾಟಕದತ್ತ ಗಮನ ಹರಿಸುವ ಸಾಧ್ಯತೆ ಕಡಿಮೆ. ಆದರೂ ಸಚಿವಾಕಾಂಕ್ಷಿ ಶಾಸಕರಲ್ಲಿ ಹೆಚ್ಚುತ್ತಿರುವ ಅಸಮಾಧಾನವನ್ನು ಕಡಿಮೆ ಮಾಡಲು, ಈ ಕುರಿತು ವರಿಷ್ಠರೊಂದಿಗೆ ಚರ್ಚಿಸಲು ಮುಖ್ಯಮಂತ್ರಿ ಪ್ರಯತ್ನಿಸುವ ಸಾಧ್ಯತೆ ಇದೆ.



ಶಾ, ನಡ್ಡಾ ಭೇಟಿ

ರಾಷ್ಟ್ರಪತಿ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಸಿಎಂಗಳೊಂದಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸಭೆ ನಡೆಸಲಿದ್ದಾರೆ. ಈ ವೇಳೆ ಅವಕಾಶವಾದಲ್ಲಿ ಇಬ್ಬರನ್ನೂ ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚಿಸಲು ಬಸವರಾಜ ಬೊಮ್ಮಾಯಿ ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಶ್ರೀನಿವಾಸದ್ವಯರ ಉಚ್ಚಾಟನೆ

ಬೆಂಗಳೂರು: ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿದ ಕೋಲಾರ ಶಾಸಕ ಕೆ.ಶ್ರೀನಿವಾಸಗೌಡ ಮತ್ತು ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಅವರನ್ನು ಜೆಡಿಎಸ್‌ನ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ. ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಬುಧವಾರ ನಡೆದ ಕೋರ್ ಕಮಿಟಿ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧ್ಯಕ್ಷ ಬಂಡೆಪ್ಪ ಖಾಶೆಂಪೂರ ಹೇಳಿದ್ದಾರೆ. ಇಬ್ಬರನ್ನೂ ಪಕ್ಷಾಂತರ ನಿಷೇಧ ಕಾಯಿದೆಯಡಿ ವಿಧಾನಸಭೆ ಸದಸ್ಯತ್ವದಿಂದ ಅನರ್ಹಗೊಳಿಸುವಂತೆ ವಿಧಾನಸಭಾಧ್ಯಕ್ಷರಿಗೆ ದೂರು ನೀಡಲು ನಿರ್ಣಯ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಎಂಜಿನಿರಿಂಗ್ ಶುಲ್ಕ 10% ಹೆಚ್ಚಳ

ಬೆಂಗಳೂರು: ಎಂಜಿನಿಯರಿಂಗ್ ಹಾಗೂ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ಶೇ. 10ರಷ್ಟು ಹೆಚ್ಚಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ.

ಶಿಕ್ಷಣ ಸಂಸ್ಥೆಗಳು ಎಂಜಿನಿಯರಿಂಗ್ ಹಾಗೂ ಇತರ ವೃತ್ತಿಪರ ಕೋರ್ಸ್‌ಗಳ ಶುಲ್ಕ ಹೆಚ್ಚಿಸುವಂತೆ ಒತ್ತಡ ಹೇರಿದ್ದು, ಅದಕ್ಕೆ ಉನ್ನತ ಶಿಕ್ಷಣ ಇಲಾಖೆ ಒಪ್ಪಿಗೆ ನೀಡಿದೆ. ಮತ್ತೊಂದು ಮಹತ್ವದ ಬೆಳವಣಿಗೆಯಲ್ಲಿ ಈಗ ಪ್ರತ್ಯೇಕವಾಗಿ ನಡೆಸುತ್ತಿರುವ ಕಾಮೆಡ್-ಕೆ ಪ್ರವೇಶ ಪರೀಕ್ಷೆಯನ್ನು ರದ್ದುಪಡಿಸಿ, ಸರಕಾರದ ಸಿಇಟಿ ವ್ಯವಸ್ಥೆಯಡಿಗೆ ವಾಪಸ್ ಬರಲು ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಒಕ್ಕೂಟ (ಕ್ಯುಪೇಕಾ) ಆಸಕ್ತಿ ತೋರಿದೆ.

ಕಾವೇರಿ ಪ್ರಾಧಿಕಾರದ ಸಭೆ ಮುಂದಕ್ಕೆ

ಬೆಂಗಳೂರು: ಮೇಕೆದಾಟು ವಿಸ್ತೃತ ಯೋಜನಾ ವರದಿ (ಡಿಪಿಆರ್) ಕುರಿತ ಕಾರ್ಯಸೂಚಿ ಹೊಂದಿರುವ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ 3ನೇ ಬಾರಿ ಮುಂದೂಡಿಕೆಯಾಗಿದೆ. ದೆಹಲಿಯಲ್ಲಿ ಗುರುವಾರ, ಪ್ರಾಧಿಕಾರದ ಸಭೆ ನಿಗದಿಯಾಗಿತ್ತಾದರೂ ಅದನ್ನು ಜುಲೈ 6ಕ್ಕೆ ಮುಂದೂಡಲಾಗಿದೆ. ಆದರೆ, ಇದಕ್ಕೆ ನಿರ್ದಿಷ್ಟ ಕಾರಣ ತಿಳಿದುಬಂದಿಲ್ಲ. ಈ ಹಿಂದೆ ಜೂ.17ರಂದು ಸಭೆ ನಿಗದಿಯಾಗಿತ್ತು. ಬಳಿಕ ಅದನ್ನು ಜೂ. 23ಕ್ಕೆ ನಿದದಿಪಡಿಸಲಾಗಿತ್ತು. ಇದೀಗ ಜುಲೈ 6ರಂದು ಸಭೆ ನಡೆಸಲು ತೀರ್ಮಾನಿಸಲಾಗಿದೆ. ಸಾಕಷ್ಟು ಪ್ರಯತ್ನದ ನಂತರ ಪ್ರಾಧಿಕಾರದ ಸಭೆಯಲ್ಲಿ ಮೇಕೆದಾಟು ಡಿಪಿಆರ್ ಕುರಿತಂತೆ ತರ್ಕಗೆ ವೇದಿಕೆ ಸಿದ್ಧವಾಗಿತ್ತು. ಈ ಮಧ್ಯೆ ತಮಿಳುನಾಡು ಸರಕಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ಸಭೆಯಲ್ಲಿ ಮೇಕೆದಾಟು ಕುರಿತು ಚರ್ಚೆ ನಡೆಸದಂತೆ ಒತ್ತಡ ಹೇರಿತ್ತು.

ಗ್ರಾಮ ವಾಸ್ತವ್ಯದಲ್ಲಿಯೇ ಇನ್ನು ಪೌತಿ ಪಂಚಾಯ್ತಿ

ಬೆಂಗಳೂರು: ಕಂದಾಯ ಇಲಾಖೆಯಲ್ಲಿ ಬಹುದೊಡ್ಡ ಸಮಸ್ಯೆಯಾಗಿರುವ ಪೌತಿ ಖಾತೆ ವರ್ಗಾವಣೆ ಬಗೆಹರಿಸಲು ಇಲಾಖೆ ಹೊಸ ಮಾರ್ಗ ಕಂಡುಕೊಂಡಿದ್ದು, ಇನ್ನು ಮುಂದೆ ಪ್ರತಿ ತಿಂಗಳು ನಡೆಯಲಿರುವ ಗ್ರಾಮ ವಾಸ್ತವ್ಯದಲ್ಲೇ ಈ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುತ್ತದೆ.

ಕಂದಾಯ ಇಲಾಖೆಯ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮದಲ್ಲಿ ಸಹಾಯಕ ಆಯುಕ್ತರು ಹಾಗೂ ಅವರ ಮೇಲ್ಪಟ್ಟ ಅಧಿಕಾರಿಗಳು ವಾಸ್ತವ್ಯ ಹೂಡುವ ಗ್ರಾಮದಲ್ಲೇ, ಗ್ರಾಮಸಭೆ ನಡೆಸಿ ಪೌತಿ ಖಾತೆಗಳ ವಿವಾದ ಇತ್ಯರ್ಥಕ್ಕೆ ಸೂಚನೆ ನೀಡಲಾಗಿದೆ. ಜುಲೈ 16ರಿಂದ ಈ ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಅಭಿಯಾನ ಯಶಸ್ವಿಯಾದರೆ, ಪೌತಿ ಖಾತೆ ಇತ್ಯರ್ಥಕ್ಕೆ ಪ್ರತ್ಯೇಕ ಗ್ರಾಮ ಸಭೆ ನಡೆಸುವ ಬಗ್ಗೆ ಚಿಂತನೆ ನಡೆಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದ್ದಾರೆ.

→ 4

ಜು.16ಕ್ಕೆ ಯೋಜನೆಗೆ ಚಾಲನೆ: ಎಸಿಗಿಂತ ಮೇಲ್ಪಟ್ಟ ಅಧಿಕಾರಿಗಳಿಗೆ ಹೊಣೆ

ಜುಲೈ 16ಕ್ಕೆ ಮಂಚೇನಹಳ್ಳೀಲಿ

ಪೌತಿ ಖಾತೆ ಸಮಸ್ಯೆ ಇತ್ಯರ್ಥ ಪಡಿಸುವ ಅಭಿಯಾನವನ್ನು ಮುಂದಿನ ಗ್ರಾಮ ವಾಸ್ತವ್ಯ ದಿಂದ ಆರಂಭಿಸಲಾಗುವುದು. ಜುಲೈ 16ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಮಂಚೇನಹಳ್ಳಿಯಲ್ಲಿ ಚಾಲನೆ ನೀಡಲಾಗುವುದು. ಇದೇ ಸಮಯದಲ್ಲಿ ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಈ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಮಂಚೇನಹಳ್ಳಿಯಲ್ಲಿ ನಡೆಯಲಿರುವ ಗ್ರಾಮ ವಾಸ್ತವ್ಯದಲ್ಲಿ ಸುಮಾರು 10 ಸಾವಿರ ಫಲಾನುಭವಿಗಳನ್ನು ಗುರುತಿಸುವ ಗುರಿ ಹಾಕಿಕೊಳ್ಳಲಾಗಿದೆ ಎಂದರು.

ರಾಜಕೀಯ ಬೊಗಳಾಟಕ್ಕೆ ಬಾಡೂಟದ ಸೇಡು

ಶ್ವಾನದ ಹುಟ್ಟುಹಬ್ಬಕ್ಕೆ 1 ಕ್ವಿಂಟಲ್ ಕೇಕ್: ಸುತ್ತಲಿನ ಗ್ರಾಮಸ್ಥರಿಗೆ 3 ಕ್ವಿಂಟಲ್ ಬಾಡೂಟ

ಮೂಡಲಗಿ: ಮನುಷ್ಯರು ಅತ್ಯಂತ ವಿಜೃಂಭಣೆಯಿಂದ ಹುಟ್ಟು ಹಬ್ಬ ಆಚರಿಸುವುದು ಸರ್ವೇಸಾಮಾನ್ಯ, ಆದರೆ ಇಲ್ಲೊಂದು ಕುಟುಂಬ ನೆಚ್ಚಿನ ಸಾಕು ನಾಯಿಯ ಜನ್ಮದಿನ ಆಚರಣೆ ಪ್ರಯುಕ್ತ 100 ಕೇಜಿ ಕೇಕ್ ಕತ್ತರಿಸಿ, ಸುಮಾರು ಐದು ಸಾವಿರ ಜನರಿಗೆ ಬಾಡೂಟ ಹಾಕುವ ಮೂಲಕ ಸಂಭ್ರಮಿಸಿದೆ.

ಆದರೆ ಇದರ ಹಿಂದೆ ಸ್ಥಳೀಯ ರಾಜಕೀಯ ಪ್ರತೀಕಾರವೂ ಅಡಗಿದೆ ಎನ್ನಲಾಗಿದ್ದು, ಏನೇ ಇದ್ದರೂ ಸುತ್ತಲಿನ ಹತ್ತಾರು ಹಳ್ಳಿಗರು ಬಾಡೂಟ ಉಂಡು ತೇಗಿದ್ದಾರೆ.

ಮೂಡಲಗಿ ತಾಲೂಕಿನ ತುಕ್ಕಾನಟ್ಟಿ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಶಿವಪ್ಪ ಯಲ್ಲಪ್ಪ ಮರ್ದಿ ಎಂಬುವವರು ತಮ್ಮ ಸಾಕು ನಾಯಿ (ಕ್ರಿಶ್) ಜನ್ಮದಿನದ ಅಂಗವಾಗಿ ಒಂದು ಕ್ವಿಂಟಲ್ ಕೇಕ್ ಕತ್ತರಿಸಿ, ಸುತ್ತಮುತ್ತಲಿನ ಗ್ರಾಮಸ್ಥರಿಗೆ ಬಾಡೂಟ ಹಾಕಿಸಿ ಶ್ವಾನ ಪ್ರೀತಿ ತೋರಿಸಿದ್ದಾರೆ. ಅಲ್ಲದೇ ತಮ್ಮ ನಾಯಿಯನ್ನು ಗ್ರಾಮದಲ್ಲಿ ಭಾಜಾ ಭಜಂತ್ರಿಗಳೊಡನೆ ಮೆರವಣಿಗೆ ಮಾಡಿದ್ದಾರೆ.

ಜನ್ಮದಿನದ ಭೋಜನಕ್ಕಾಗಿ 3 ಕ್ವಿಂಟಲ್ ಚಿಕನ್, ಮೊಟ್ಟೆಗಳೊಂದಿಗೆ ಸಸ್ಯಹಾರಿ ಊಟ ಮಾಡುವವರಿಗೆ 50 ಕೆಜಿ ಕಾಜೂ ಕರಿಯನ್ನು ತಯಾರು ಮಾಡಲಾಗಿತ್ತು. ಈ ಭರ್ಜರಿ ಬಾಡೂಟ ಸವಿದ ಗ್ರಾಮಸ್ಥರು ನಾಯಿಯ ಹುಟ್ಟು ಹಬ್ಬದ ನೆಪದಲ್ಲಿ ಕುಣಿದು ಕುಪ್ಪಳಿಸಿದ್ದಾರಲ್ಲದೇ ನಾಯಿಯ ದೀರ್ಘಾಯುಷ್ಯಕ್ಕೆ ಹಾರೈಸಿದ್ದಾರೆ.

ಹಿಂದಿದೆ ರಾಜಕೀಯ

ಮೂಡಲಗಿ ತಾಲೂಕಿನ ತುಕ್ಕಾನಟ್ಟಿ ಗ್ರಾಮದ ಶಿವಪ್ಪ ಯಲ್ಲಪ್ಪ ಮರ್ದಿ ಕಳೆದ 20 ವರ್ಷಗಳಿಂದ ಗ್ರಾಮ ಪಂಚಾಯಿತಿ ಸದಸ್ಯರಾಗಿ ಕೆಲಸ ಮಾಡಿದವರು. ಆದರೆ ಹೊಸದಾಗಿ ಆಯ್ಕೆಯಾದ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ತಮ್ಮ ಹುಟ್ಟುಹಬ್ಬದ ಕಾರ್ಯ ಕ್ರಮದಲ್ಲಿ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಲ್ಲದೇ ಭ್ರಷ್ಟಾಚಾರ ಆರೋಪವನ್ನು ಮಾಡಿ ದ್ದರು. ಈ ಆರೋಪದಿಂದ ಕೋಪಗೊಂಡ ಮರ್ದಿ ಕುಟುಂಬ ಸಾವಿರಾರು ರು. ಖರ್ಚುಮಾಡಿ ತಮ್ಮ ಶ್ವಾನದ ಹುಟ್ಟುಹಬ್ಬ ಆಚರಿಸಿದೆ ಎನ್ನಲಾಗುತ್ತಿದೆ.

ಕಳೆದ ಇಪ್ಪತ್ತು ವರ್ಷಗಳಿಂದ ಗ್ರಾಮ ಪಂಚಾಯಿತಿ ಸದಸ್ಯನಾಗಿ ಅತ್ಯಂತ ಪ್ರಾಮಾಣಿಕ ಸೇವೆ ಸಲ್ಲಿಸಿದ್ದೆ. ಈವರೆಗೂ ಒಂದು ರು. ಭ್ರಷ್ಟಾಚಾರ ಹಣ ಮುಟ್ಟಿಲ್ಲ. ಆದರೆ ಸದ್ಯದ ಗ್ರಾಮ ಪಂಚಾಯಿತಿ ಸದಸ್ಯ ನಮ್ಮ ಮೇಲೆ ಆರೋಪ ಮಾಡಿ ನಾಯಿಗಳಿಗೆ ಹೋಲಿಕೆ ಮಾಡಿ ದ್ದು ನೋವಾಗಿದ್ದರಿಂದ, ನಾಯಿಯ ಹುಟ್ಟು ಹಬ್ಬ ಆಚರಿಸಿ ಉತ್ತರ ನೀಡಿದ್ದೇವೆ.

-ಶಿವಪ್ಪ ಯಲ್ಲಪ್ಪ ಮರ್ದಿ
ಶ್ವಾನದ ಮಾಲೀಕ